ಮಧ್ಯಂತರ ಅರ್ಜಿ ಸಂಖ್ಯೆ 9 ರ ಮೇಲೆ ಆದಂತಹ ಆದೇಶದ ಮೇರೆಗೆ ಸಾಕ್ಷಿಯನ್ನು ಮುಂದುವರೆದ ಪಾಟಿ ಸವಾಲಿಗಾಗಿ ಪುನಃ ಕರೆಯಿಸಿ ದಿನಾಂಕಃ 03-02-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- 3 ನೇ ಎದುರುದಾರ ಪರ ಶ್ರೀ ಎ ಎನ ಐ ವಕೀಲರಿಂದ

ಮೃತ 1 ನೇ ಎದುರುದಾರ ಗುತ್ತಿಗೆದಾರರಾಗಿದ್ದರು. ನಾನು 1 ನೇ ಎದುರುದಾರರ ಹತ್ತಿರ ಕೆಲಸ ಮಾಡುತ್ತಿದ್ದು ಉಪ ಗುತ್ತಿಗೆದಾರನಾಗಿ ಹಾಗೂ ಜೆಸಿಬಿ ಚಾಲನೆಯ ಕೆಲಸ ಮಾಡುತ್ತಿದ್ದೆ. 1 ನೇ ಎದುರುದಾರರು ಹಲವಾರು ಕಡೆ ಕೆಲಸ ಮಾಡಿಸುತ್ತಿದ್ದರು ಎಂದರೆ ಸರಿ. ಅಪಘಾತದ ದಿನಾಂಕದಂದು ನಾನು ಮೃತ 1 ನೇ ಎದುರುದಾರರ ಕಾರಿನಲ್ಲಿ ಸವಣೂರನಿಂದ ಗದಗಗೆ ರಸ್ತೆ ನೋಡಲು ಹೋಗುತ್ತಿದ್ದೆನು. ಗುಲಗುಂಜಿಕೊಪ್ಪದ ಹತ್ತಿರ ಹೋಗುತ್ತಿರುವಾಗ ಎದುರುಗಡೆಯಿಂದ ಬಸ್ಸು ಬಂದು ನಮ್ಮ ಕಾರಿಗೆ ಅಪಘಾತಪಡಿಸಿತ್ತು. ಅಪಘಾತ ಸ್ಥಳದಲ್ಲಿ ಎಸ್ ಆಕಾರದಲ್ಲಿ ತಿರುವು ಇದೆ ಎಂದರೆ ಒಂದು ಕಡೆ ತಿರುವು ಇದೆ. ಸದರಿ ರಸ್ತೆ ಸವಣೂರ ಕಡೆಯಿಂದ ಹೋಗುವಾಗ ಇಳಿಜಾರು ಇದೆ ಹಾಗೂ ಎದುರುಗಡೆಯಿಂದ ಬರುವಾಗ ಮೇಲ್ಮುಖವಾಗಿದೆ ಎಂದರೆ ಸರಿಯಲ್ಲ. ರಸ್ತೆ ಆ ರೀತಿ ಇದ್ದರೂ ಸಹ ಸಮವಾಗಿ ಇದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ರಸ್ತೆಯ ತಿರುವಿನಲ್ಲಿ ಅಕ್ಕಪಕ್ಕ ಗಿಡಗಳು ಇವೆ ಎಂದರೆ ಸರಿ. ಸದರಿ ರಸ್ತೆ 5 ಮೀಟರ ಅಗಲ ಇದೆ. ಸದರಿ ರಸ್ತೆ 18 ಪೂಟು ಅಗಲ ಇದ್ದು ಎರಡು ವಾಹನಗಳು ಸರಳವಾಗಿ ಚಲಿಸಬಹುದು ಎಂದರೆ ಸರಿ. ಅಪಘಾತದ ದಿನಾಂಕದಂದು ಮೃತ 1 ನೇ ಎದುರುದಾರ ಮಧ್ಯಪಾನ ಮಾಡಿ ಕಾರು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಎರಡೂ ಕೈ ಹಾಗೂ ಬಲಗಾಲಿನ ಮೂಳೆ ಮುರದಿದ್ದವು. ನಾನು ಕೀಮ್ಸ್ ಆಸ್ಪತ್ರೆಯಲ್ಲಿ 20 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಈಗ ನನಗೆ 39 ವರ್ಷ ವಯಸ್ಸು. ನಾನು ಜೆಸಿಬಿ ಚಾಲಕಾಗಿದ್ದೆ ಹಾಗೂ ಉಪಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹಾಲಿನ ವ್ಯಾಪಾರ ಮಾಡುತ್ತಿದ್ದೆ ಎಂದು ಬರೆಸಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

ಮೃತ 1 ನೇ ಎದುರುದಾರ ಬೇರೆ ಬೇರೆ ಕೆಲಸಗಳನ್ನು ನೋಡಿಕೊಂಡು ಹೋಗುತ್ತಿರುವಾಗ ಅಜಾಗರೂಕತೆಯಿಂದ ಕಾರು ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆಯಿಂದ ಬರುತ್ತಿದ್ದ ಬಸ್ಸಿ ಗೆ ಅಪಘಾತಪಡಿಸಿದ್ದರು ಎಂದರೆ ಸರಿಯಲ್ಲ. ಅಪಘಾತ ಮೃತ 1 ನೇ ಎದುರುದಾರರ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ರೂ. 1,25,000/- ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ನತೆ ಉಂಟಾಗದಿದ್ದರೂ ಸಹ ಸುಳ್ಳು ಅಂಗನ್ಯೂನ್ನತೆ ಪ್ರಮಾಣಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನಿಪಿ 4 ರಿಂದ 6 ಹಾಗೂ 12 ರಿಂದ 20 ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಮೃತ 1 ನೇ ಎದುರುದಾರರ ತಪ್ಪಿ ನಿಂದ ಆಗಿರುವುದರಿಂದ ಹಾಗೂ ಬಸ್ಸಿ ನ ಚಾಲಕನ ತಪ್ಪು ಇರದಿರುವ ಕಾರಣ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ

ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)